ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (223) 114
ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ಶ್ರೀ ಲಕ್ಷ್ಮೀಶಾ, ಎಸ್, ಸವದಿ)

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಯಾವ ಇಲಾಖೆಯಿಂದ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ;	ರಾಜ್ಯದಲ್ಲಿ ಸಹಕಾರ ಇಲಾಖೆಯಿಂದ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.
ಆ.	ಹಾಗಿದ್ದಲ್ಲಿ, ಆ ಯೋಜನೆಯಿಂದ ಇಲ್ಲಿಯವರೆಗೆ ಬಾಕಿ ಇರುವ ಅರ್ಜಿಗಳೆಷ್ಟು?	ಈ ಯೋಜನೆಯಲ್ಲಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.
ಇ.	ಶಸ್ತ್ರಚಿಕಿತ್ಸೆಗಾಗಿ ಅನುಸರಿಸುತ್ತಿರುವ ನಿಯಮಾವಳಿಗಳೇನು?	ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳುವ ಪೂರ್ವದಲ್ಲಿ ಯಶಸ್ವಿನಿ ಫಲಾನುಭವಿಯು ಯಶಸ್ವಿನಿ ಟ್ರಸ್ಟ್ ಗುರುತಿಸಿದ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಹಾಜರಾಗಿ ಗುರುತಿನ ಚೀಟಿಯನ್ನು ತೋರಿಸಬೇಕು. ಆಸ್ಪತ್ರೆಯ ವೈದ್ಯರು ಆತನ ಆರೋಗ್ಯ ತಪಾಸಣೆ ಮಾಡಿದ ನಂತರ ಆತನಿಗೆ ಯಶಸ್ವಿನಿ ಟ್ರಸ್ಟ್ ಗುರುತಿಸಿದ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದ್ದಲ್ಲಿ ಆಸ್ಪತ್ರೆಯು ಪೂರ್ವಾನುಮತಿಯನ್ನು ಪಡೆಯಲು ಯೋಜನೆಯ ಅನುಷ್ಠಾನ ಏಜೆನ್ಸಿ ಫ್ಯಾಮಿಲಿ ಹೆಲ್ತ್ ಪ್ಲಾನ್ ನಿಯಮಿತ ಬೆಂಗಳೂರು ಇವರಿಗೆ ಪ್ರಸ್ತಾವನೆಯನ್ನು ಕಳಿಸಬೇಕು. ಪೂರ್ವಾನುಮತಿ ಸ್ವೀಕೃತವಾದ ನಂತರ ಚಿಕಿತ್ಸೆಯನ್ನು ಮಾಡಬೇಕು. ಆದಾಗ್ಯೂ ತುರ್ತು ಪರಿಸ್ಥಿತಿಯಲ್ಲಿ ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇಲ್ಲ. ಆದರೆ ಈ ಬಗ್ಗೆ ಆಸ್ಪತ್ರೆಯು ಫ್ಯಾಮಿಲಿ ಹೆಲ್ತ್ ಪ್ಲಾನ್ ನಿಯಮಿತ ಸಂಸ್ಥೆಗೆ ಕೂಡಲೇ ಮಾಹಿತಿಯನ್ನು ಕಳಿಸಬೇಕು. ಮತ್ತು ಯಶಸ್ವಿನಿ ಫಲಾನುಭವಿಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಪೂರ್ವದಲ್ಲಿ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕು.

ಈ.	ಬಡವರಿಗೆ ಶಸ್ತ್ರ ಚಿಕಿತ್ಸೆಯ ಪೂರ್ಣ ಸಹಾಯ ಸಿಗದೇ ಇರುವುದು ಮತ್ತು ಹಾಲಿಗಾಗಿ ಪ್ರತ್ಯೇಕ ಹಣವನ್ನು ರೋಗಿಗಳಿಂದ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಯಶಸ್ವಿನಿ ಯೋಜನೆಯಲ್ಲಿ ಸ್ಟಂಟ್, ವಾಲ್ವ ಇತ್ಯಾದಿ ಉಪಕರಣಗಳು ಒಳಗೊಂಡಿರುವುದಿಲ್ಲ. ಅವುಗಳ ವೆಚ್ಚವನ್ನು ಯಶಸ್ವಿನಿ ಫಲಾನುಭವಿಯೇ ಪಾವತಿ ಮಾಡಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯ ಪ್ಯಾಕೇಜ್ ನಲ್ಲಿ ಶಸ್ತ್ರಚಿಕಿತ್ಸೆ ಆದಾಗಿನಿಂದ ರೋಗಿಯ ಬಿಡುಗಡೆ ಆಗುವವರೆಗಿನ ಎಲ್ಲಾ ವೆಚ್ಚ ಅಂದರೆ ವೈದ್ಯಾಧಿಕಾರಿಯ ಫೀ, ಬೆಡ್ ಚಾರ್ಜು, ಔಷಧಿಯ ವೆಚ್ಚ, ನರ್ಸ್ ಚಾರ್ಜು ಇತ್ಯಾದಿ ಒಳಗೊಂಡಿರುವುದರಿಂದ ಯಶಸ್ವಿನಿ ಫಲಾನುಭವಿಯ ಹಾಲಿಗಾಗಿ ಪ್ರತ್ಯೇಕ ಹಣವನ್ನು ಆಸ್ಪತ್ರೆಗೆ ಪಾವತಿ ಮಾಡಬೇಕಾಗಿಲ್ಲ. ಯಶಸ್ವಿನಿ ಟ್ರಸ್ಟಿನ ನಿಯಮಗಳಿಗೆ ವಿರುದ್ಧವಾಗಿ ಯಶಸ್ವಿನಿ ಫಲಾನುಭವಿಗಳಿಂದ ಹಣವನ್ನು ವಸೂಲಿ ಮಾಡದೇ ಇರುವ ಬಗ್ಗೆ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಸುತ್ತೋಲೆ ನೀಡಲಾಗಿದೆ. ನಿಯಮಗಳಿಗೆ ವಿರುದ್ಧವಾಗಿ ವರ್ತಿಸುತ್ತಿದ್ದ ಕೆಲವು ಆಸ್ಪತ್ರೆಗಳನ್ನು ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿಯಿಂದ ಸ್ಥಗಿತಗೊಳಿಸಲಾಗಿದೆ ಮತ್ತು ಕೆಲವು ಆಸ್ಪತ್ರೆಗಳನ್ನು ತೆಗೆದುಹಾಕಲಾಗಿದೆ. ಆದಾಗ್ಯೂ, ಸ್ಪೆಷಲ್ ರೂಂನಲ್ಲಿ ಚಿಕಿತ್ಸೆ ಪಡೆಯಲು ಬಯಸುವ ಯಶಸ್ವಿನಿ ಫಲಾನುಭವಿಗಳ ಹೆಚ್ಚಿನ ವೆಚ್ಚವನ್ನು ಯಶಸ್ವಿನಿ ಟ್ರಸ್ಟ್ ಭರಿಸುವುದಿಲ್ಲ. ಫಲಾನುಭವಿಗಳೇ ಭರಿಸಬೇಕಾಗುತ್ತದೆ.
ಉ.	ಹಾಗಿದ್ದಲ್ಲಿ, ರೋಗಿಗಳಿಗೆ ಚಿಕಿತ್ಸೆಯ ಪೂರ್ತಿ ಹಣ ನೀಡಲಾಗುವುದೇ? ಇಲ್ಲವಾದಲ್ಲಿ ಕಾರಣಗಳೇನು (ವಿವರ ನೀಡುವುದು)	ಯಶಸ್ವಿನಿ ಯೋಜನೆಯು ಸ್ವಂತ ಬಂಡವಾಳ ಯೋಜನೆಯಾಗಿದ್ದು ಫಲಾನುಭವಿಗಳಿಂದ ಸಂಗ್ರಹಿಸಿದ ವಂತಿಗೆ ಹಣದಿಂದ ವೆಚ್ಚವನ್ನು ಭರಿಸಬೇಕಾಗಿದೆ. ಈ ಹಣವು ವೆಚ್ಚವನ್ನು ಭರಿಸಲು ಸಾಲುತ್ತಿಲ್ಲ. ಸರ್ಕಾರವು ತನ್ನ ವಂತಿಗೆ ಹಣವನ್ನು ವರ್ಷೇ ವರ್ಷೇ

		ಹೆಚ್ಚಿಸಿರುವುದರಿಂದ ಯೋಜನೆಯನ್ನು ಮುಂದುವರಿಸುವುದು ಸಾಧ್ಯವಾಗಿದೆ. ಯಶಸ್ವಿನಿ ಯೋಜನೆಯ ಅನುಷ್ಠಾನದಲ್ಲಿ ಆದ ಹೆಚ್ಚಿನ ವೆಚ್ಚವನ್ನು ಪೂರ್ತಿಯಾಗಿ ಭರ್ತಿ ಮಾಡಿಕೊಡುವ ಆಶ್ವಾಸನೆ ಸರ್ಕಾರದಿಂದ ಇರುವುದಿಲ್ಲ. ಆದ್ದರಿಂದ, ರೋಗಿಗಳ ಚಿಕಿತ್ಸೆಯ ಪೂರ್ತಿ ಹಣ ನೀಡುವುದು ಸಾಧ್ಯವಾಗುವುದಿಲ್ಲ.